

ಅಲಯನ್ಸ್ ವಿಶ್ವವಿದ್ಯಾಲಯದ ಕಾನೂನೂ ಶಾಲೆಯಲ್ಲಿ ಪರ್ಯಾಯ ವಿವಾದ ನಿರ್ಣಯ ಕುರಿತಾದ ಅಂತರರಾಷ್ಟೀಯ ಸಮ್ಮೇಳನವನ್ನು ಓರಿಸ್ಸಾ ಹೈಕೋರ್ಟ್ ನ್ಯಾಯಾಧೀಶ ಸಂಜೀಬ್ ಕುಮಾರ್ ಅವರು ಉದ್ಘಾಟಿಸಿದರು

# ಅಂತರರಾಷ್ಟ್ರೀಯ ಸಮ್ಮೇಳನ

ಆನೇಕಲ್: ಅಲಯನ್ಸ್ ವಿಶ್ವವಿದ್ಯಾಲಯದ ಕಾನೂನೂ ಶಾಲೆಯಲ್ಲಿ ಪರ್ಯಾಯ ವಿವಾದ ನಿರ್ಣಯ ಕುರಿತಾದ ಅಂತರರಾಷ್ಟ್ರೀಯ ಸಮ್ಮೇಳನವನ್ನು ಒಡಿಶಾ ಹೈಕೋರ್ಟ್ ನ್ಯಾಯಾಧೀಶ ಸಂಜೀಬ್ ಕುಮಾರ್ ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಸಮಸ್ಯೆ ಮತ್ತು ವಿವಾದ ಪರಿಹಾರ ಕುರಿತು ಚರ್ಚಿಸಲು ಹಾಗೂ ಕಾನೂನು ಕ್ಷೇತ್ರದಲ್ಲಿ ಕೆಲಸ ಮಾಡುವ ಮನಸ್ಸುಗಳನ್ನು ಉತ್ತೇಜಿಸಲು ಸಮ್ಮೇಳನ ವೇದಿಕೆಯಾಗಿದೆ ಎಂದರು.

ಅಲಯನ್ಸ್ ವಿಶ್ವವಿದ್ಯಾಲಯದ ಸಹ ಕುಲಪತಿ ಅಭಯ್.ಜಿ.ಚೆಬ್ಬಿ ಮಾತನಾಡಿ, ಕಾನೂನು ವಿದ್ಯಾರ್ಥಿಗಳು ಸಂಶೋಧನೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಹೆಚ್ಚಿನ ಜ್ಞಾನ ಪಡೆದುಕೊಳ್ಳಬೇಕು. ಈ ಮೂಲಕ ತಮ್ಮ ವೃತ್ತಿ ಜೀವನದಲ್ಲಿ ಕಕ್ಷಿದಾರರಿಗೆ ನ್ಯಾಯ ಒದಗಿಸಲು ಅನುಕೂಲವಾಗುತ್ತದೆ. ಯಾವುದೇ ವಿವಾದಗಳನ್ನು ಮಧ್ಯಸ್ಥಿಕೆಯ ಮೂಲಕ ಶಾಂತಿಯುತ ಮತ್ತು ಶಾಶ್ವತವಾಗಿ ಪರಿಹರಿಸಿಕೊಳ್ಳಬಹುದಾಗಿದೆ ಎಂದರು.

ಅಲಯನ್ಸ್ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಅನುಬಾ ಸಿಂಗ್, ಅಲಯನ್ಸ್ ಕಾನೂನು ಕಾಲೇಜಿನ ಡೀನ್ ಡಾ.ಕಿರಣ್ ಡೆನ್ನಿಸ್ ಗಾರ್ಡ್ನರ್, ಕಾನೂನು ಸಲಹೆಗಾರರಾದ ರೇಷ್ಮಾ ಓಗೋಹಾರ್, ಡಾ.ಪೂರ್ವಿ ಪೋಖಾರಿಯಾಲ್ ಇದ್ದರು.

‘ಪರ್ಯಾಯ ವಿವಾದ ನಿರ್ಣಯ ಭವಿಷ್ಯ ಮತ್ತು ಸವಾಲುಗಳು-2022’ ವಿಷಯದ ಕುರಿತು 26 ಸಂಸ್ಥೆಗಳಿಂದ 80 ಪ್ರಬಂಧ ಮಂಡನೆ ಆಯಿತು. ಪರ್ಯಾಯ ವಿವಾದ ನಿರ್ಣಯದಲ್ಲಿನ ಬೆಳವಣಿಗೆಗಳ ಬಗ್ಗೆ ಚರ್ಚಿಸಲಾಯಿತು.